(Interruptions)

ಶ್ರೀ ಆರ್. ದಯಾನಂದ ರಾವ್:– ಕನ್ನಡದಲ್ಲಿ ಹೇಳಿಕೆ ನೀಡಬೇಕು.....

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ :– ಇವರಿಗೆ ಕನ್ನಡವೇ ಬರುವುದಿಲ್ಲವೇ ?

(ಗೊಂದಲ)

SRI K.A. NISSAR AHAMED:– The bill hit the Neutral wire which has resulted in the said loss. For this the K.E.B. staff are not responsible. Immediately after the residents of the said area brought this to the notice of the concerned O and M Unit of K.E.B. the said defect has been rectified and the arrangements have been made for supply of 220 Volts of power. Since the above incident is an accident one, the question of paying compensaiton does not arise.

ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ

ಶ್ರೀ ಪಿ.ಸಿ. ಸಿದ್ದನಗೌಡರ್:– ಸನ್ಮಾನ್ಯ ಅಧ್ಯಕ್ಷಿಣಿಯವರೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಇಲ್ಲದೆ ಅಲ್ಲಿನ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬ ತೊಂದರೆಯಾಗಿರುತ್ತದೆ. ಅಲ್ಲಿ ಸುತ್ತಮುತ್ತಲು ಪಶುವೈದ್ಯ ಚಿಕಿತ್ಸಾಲಯಗಳು ಎಲ್ಲೂ ಇರುವುದಿಲ್ಲ. ಆದಕಾರಣ ಈ ಎರಡು ಗ್ರಾಮಗಳಲ್ಲಿ ಸರ್ಕಾರಿ ಪಶು ವೈದ್ಯ ಚಿಕಿತ್ಸಾಲಯಗಳು ಮತ್ತು ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ಈಗಿರುವ ಪಶು ವೈದ್ಯ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಮಾನ್ಯ ಪಶು ಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು. ನೂಲ್ವಿ ಗ್ರಾಮದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳು ಇಲ್ಲದೆ ಅಲ್ಲಿರುವ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಸುತ್ತಮುತ್ತಲೂ ಎಲ್ಲೂ ಪಶು ಚಿಕಿತ್ಸಾಲಯಗಳಿರುವುದಿಲ್ಲ. ಆದಕಾರಣ, ಈ ಎರಡು ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯಗಳನ್ನು ಮತ್ತು ಹುಬ್ಬಳ್ಳಿಯ ಸೂಲ್ವಿ ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮಕ್ಕೆ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಬಗ್ಗೆ, ಕಲಘಟಗಿ ತಾಲ್ಲೂಕಿನ ಒಟ್ಟು ಜಾನುವಾರುಗಳ ಸಂಖ್ಯೆ 96,813 ಇದ್ದು, ಅದಕ್ಕನುಗುಣವಾಗಿ 66,897 ದನಗಳ ಘಟಕಗಳು ಇರುತ್ತವೆ. ಈ ದನಗಳ ಘಟಕಗಳಿಗೆ ಅನುಗುಣವಾಗಿ ಈ ತಾಲ್ಲೂಕಿಗೆ ಒಟ್ಟು 13 ಪಶು ಚಿಕಿತ್ಸಾ ಕೇಂದ್ರಗಳು ಬೇಕಾಗಿರುತ್ತವೆ. ಹಾಲಿ ಈಗ 7 ಪಶು ಚಿಕಿತ್ಸಾ ಕೇಂದ್ರಗಳಿದ್ದು ಇನ್ನೂ 6 ಪಶು ಚಿಕಿತ್ಸಾ

ಕೇಂದ್ರಗಳ ಅವಶ್ಯಕತೆ ಇರುತ್ತದೆ.

ಹುಬ್ಬಳ್ಳಿ ತಾಲ್ಲೂಕಿನಲ್ಲಿ ಜಾನುವಾರುಗಳ ಸಂಖ್ಯೆ 79,512ಗಳಿದ್ದು ಆದಕ್ಕನುಗುಣವಾಗಿ 37,020 ದನಗಳ ಘಟಕಗಳಿರುತ್ತವೆ. ಈ ದನಗಳ ಘಟಕಗಳ ಪ್ರಕಾರ ಹುಬ್ಬಳ್ಳಿ ತಾಲ್ಲೂಕಿಗೆ ಒಟ್ಟು 7 ಪಶು ಚಿಕಿತ್ಸಾ ಕೇಂದ್ರಗಳು ಬೇಕಾಗುತ್ತವೆ. ಹಾಲಿ 5 ಪಶುಚಿಕಿತ್ಸಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇನ್ನೂ 2 ಕೇಂದ್ರಗಳ ಅವಶ್ಯಕತೆ ಇದೆ.

ಮೇಲ್ಕಂಡ ಎರಡು ಗ್ರಾಮಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಈಗಾಗಲೇ ಕಾರ್ಯ ನಿರ್ವಹಿಸುತ್ತಿದೆ. ಈ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚೇರ್‌ಮನ್:– ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಕೆ.ಇ.ಬಿ. ಬಗ್ಗೆ ಸ್ಟೇಟ್‌ಮೆಂಟ್‌ನ್ನು ಮಾಡುತ್ತಾರೆ.

2-10 ಪಿ.ಎಮ್.

ಮಂತ್ರಿಗಳಿಂದ ಹೇಳಿಕೆ

17-2-93 ರಂದು ವಿದ್ಯುತ್ ಜಾಲದಲ್ಲಿ ಆದ ಅಡಚಣೆ

1993ರ ಫೆಬ್ರವರಿ 17ರಂದು ರಾತ್ರಿ ಸುಮಾರು 9.20ಕ್ಕೆ ವಿದ್ಯುತ್ ವ್ಯವಸ್ಥೆಯಲ್ಲಿ ಹೆಚ್ಚಿನ ವೋಲ್ಟೇಜ್ ವ್ಯತ್ಯಾಸ ಕಂಡು ಬಂದಿತು. ಆಂಧ್ರಪ್ರದೇಶದ ನಾಗಾರ್ಜುನ ಸಾಗರದ ಬಳಿ 400–200 ಕೆ.ವಿ. ಉಪಕೇಂದ್ರದಲ್ಲಿ 220 ಕೆ.ವಿ. ಬಸ್ ತೊಂದರೆ ಉಂಟಾಗಿರುವುದಾಗಿಯೂ ಇದರಿಂದಾಗಿ ಆಂಧ್ರಪ್ರದೇಶದ ರಾಮಗುಂಡಂ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ಪ್ರತಿಯೊಂದೂ 500 ಮೆ.ವಾ. ಸಾಮರ್ಥ್ಯದ ಮೂರು ಘಟಕಗಳ ಉತ್ಪಾದನೆ ನಿಂತಿದೆಯೆಂದು ದಕ್ಷಿಣ ವಲಯ ವಿದ್ಯುಚ್ಛಕ್ತಿ ಮಂಡಳಿಯಿಂದ ತಿಳಿದು ಬಂತು. ಇದೇ ಸಮಯದಲ್ಲಿ, ಕೇಂದ್ರ ಉತ್ಪಾದನಾ ಕೇಂದ್ರಗಳಿಂದ ಕರ್ನಾಟಕವು ಸೋಮನಹಳ್ಳಿ ಬಿಂದುವಿನಲ್ಲಿ 650 ಮೆ.ವಾ. ವಿದ್ಯುತ್ತನ್ನು ಪಡೆಯುತ್ತಿತ್ತು. ಆಗ ರಾಮಗುಂಡಂನ ಉತ್ಪಾದನೆ 1800 ಮೆ.ವಾ. ನೈವೇಲಿಯಲ್ 950 ಮೆ.ವಾ. ಮತ್ತು ಕಲ್ಪಾಕಂ ಅಣು ವಿದ್ಯುತ್ ಕೇಂದ್ರದಲ್ಲಿನ ಉತ್ಪಾದನೆ 310 ಮೆ.ವಾ. ಇತ್ತು.

ಫ್ರೀಕ್ವೆನ್ಸಿಯನ್ನು ಉಳಿಸಿಕೊಳ್ಳಲು ಸುಮಾರು 200 ಮೆ.ವಾ. ವಿದ್ಯುತ್ ಪ್ರಮಾಣವನ್ನು ಕಡಿಮೆ ಮಾಡಲು ಕರ್ನಾಟಕದಲ್ಲಿ ಕ್ರಮ ಕೈಗೊಳ್ಳಲಾಗಿತ್ತು. ಆದರೆ ಪುನಃ ರಾತ್ರಿ 9.50ಕ್ಕೆ ಫ್ರಿಕ್ವೆನ್ಸಿಯು 48 ಸೈಕಲ್ಸ್‌ಗಿಂತ ಕಡಿಮೆಗೆ ಇಳಿಯಿತು. ನೈವೇಲಿ ಲಿಗ್ನೈಟ್ ಕಾರ್ಪೋರೇಷನ್ ಘಟಕಗಳ ಉತ್ಪಾದನೆ ನಿಂತಿದ್ದರಿಂದ ವಿದ್ಯುತ್ ಜಾಲ ಹಾಗೂ ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಹರಿಯುವ ವಿದ್ಯುತ್ತು ಕುಸಿದುಬಿತ್ತು. ಆದೇ ಸಮಯಕ್ಕೆ ಮದರಾಸು ಅಣು ವಿದ್ಯುತ್ ಕೇಂದ್ರದ ಘಟಕಗಳು ಹಾಗೂ ರಾಮಗುಂಡಂ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಉಳಿದ ಘಟಕಗಳ ಉತ್ಪಾದನೆಯೂ ನಿಂತುಹೋಯಿತು. ಈ ಎಲ್ಲ ವಿದ್ಯುತ್ ಜಾಲ ಅಡಚಣೆಗಳಿಂದಾಗಿ ಶರಾವತಿ ಮತ್ತು ನಾಗಝರಿಯ ಎಲ್ಲ ಘಟಕಗಳು ಹಾಗು ರಾಯಚೂರು ಶಾಖೋತ್ಪನ್ನ ಸ್ಥಾವರದ ಒಂದು ಘಟಕದ ಉತ್ಪಾದನೆಗಳೂ ನಿಂತುಹೋದುವು. ವರಾಹಿಯ ಒಂದು ಘಟಕವು ಮಂಗಳೂರಿಗೆ ವಿದ್ಯುತ್ ಸರಬರಾಜನ್ನು ಮುಂದುವರಿಸಿದರೆ, ಆರ್.ಟಿ.ಪಿ.ಎಸ್.ನ ಒಂದು ಘಟಕವು ರಾಯಚೂರು ಮತ್ತು ಗುಲಬರ್ಗ